# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭಾ ಕ್ಷೇತ್ರ)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **155 (173)**

ಉತ್ತರಿಸುವ ಸಚಿವರು : ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

ಉತ್ತರಿಸಬೇಕಾದ ದಿನಾಂಕ : **09-12-2025**

*****

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಸಿಂಧನೂರು ನಗರದಲ್ಲಿನ ಯುವಕ ಯುವತಿಯರು ನಿರುದ್ಯೋಗ ಸಮಸ್ಯೆಯಿಂದ ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಗೋವಾ, ಮಹಾರಾಷ್ಟ್ರ ಮುಂತಾದ ಸ್ಥಳಗಳಿಗೆ ವಲಸೆ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಈ ಕುರಿತು ಯಾವುದೇ ಪ್ರಕರಣಗಳು ಇಲಾಖೆಯಲ್ಲಿ ದಾಖಲಾಗಿರುವುದಿಲ್ಲ.</td></tr>
<tr><td>(ಆ)</td><td>ಸಿಂಧನೂರು ತಾಲ್ಲೂಕಿನಲ್ಲಿ ಜವಳಿ ಪಾರ್ಕ್‌ಅನ್ನು ಸ್ಥಾಪಿಸಿದ್ದಲ್ಲಿ ಹಲವಾರು ಯುವಕ ಯುವತಿಯರಿಗೆ ಉದ್ಯೋಗಾವಕಾಶ ದೊರಕುವುದು ಸರ್ಕಾರದ ಗಮನದಲ್ಲಿ ಇದೆಯೇ;</td><td>ಹೌದು.</td></tr>
<tr><td>(ಇ)</td><td>ಇದ್ದಲ್ಲಿ ಸಿಂಧನೂರಿನಲ್ಲಿ ಜವಳಿ ಪಾರ್ಕ್ ಸ್ಥಾಪಿಸುವ ಪ್ರಸ್ತಾವನೆ ಯಾವ ಹಂತದಲ್ಲಿದೆ; (ವಿವರ ನೀಡುವುದು)</td><td rowspan="2">ಜವಳಿ ಪಾರ್ಕ್ (Textile Park) ಸ್ಥಾಪಿಸಲು ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2019-24ರ ಕಂಡಿಕೆ-12 ರಂತೆ ವೈಯಕ್ತಿಕ/ ಎಸ್.ಪಿ.ವಿ ರವರು ಕನಿಷ್ಠ 15 ಎಕರೆ ವಿಸ್ತೀರ್ಣ ಜಮೀನು ಹೊಂದಿರಬೇಕಾಗಿರುತ್ತದೆ.<br>ವೈಯಕ್ತಿಕ/ ಎಸ್.ಪಿ.ವಿ ರವರು ಕನಿಷ್ಠ 15 ಎಕರೆ ವಿಸ್ತೀರ್ಣ ಜಮೀನು ಹೊಂದಿ, ಪಾರ್ಕ್ ಸ್ಥಾಪಿಸಲು ಮುಂದೆ ಬಂದಲ್ಲಿ ನೂತನ ಜವಳಿ ಮತ್ತು ಸಿದ್ಧಉಡುಪು ನೀತಿ 2019-24 ಅನ್ವಯ ಸಾಮಾನ್ಯ ಮೂಲಭೂತ ಸೌಕರ್ಯ ಅಭಿವೃದ್ಧಿಗಾಗಿ ಯೋಜನಾ ವೆಚ್ಚದ ಮೇಲೆ 40% ಅಥವಾ ರೂ.40.00 ಕೋಟಿವರೆಗೆ ಸಹಾಯಧನ ಪಡೆಯಲು ಅವಕಾಶವಿರುತ್ತದೆ.<br>ಅದರಂತೆ, ಅಗತ್ಯವಿರುವ ಕನಿಷ್ಠ 15 ಎಕರೆ ಜಮೀನಿನನ್ನು ಗುರುತಿಸಿ ಇಲಾಖೆಯ ಹೆಸರಿಗೆ ಹಸ್ತಾಂತರಿಸಲು ತಹಶೀಲ್ದಾರರು, ಕಂದಾಯ ಇಲಾಖೆ, ಸಿಂಧನೂರು ತಾಲ್ಲೂಕು ಇವರಿಗೆ ಪತ್ರ ಬರೆಯಲಾಗಿದ್ದು, ಪರಿಶೀಲನಾ ಹಂತದಲ್ಲಿರುತ್ತದೆ.</td></tr>
<tr><td>(ಈ)</td><td>ಯಾವ ಕಾಲಮಿತಿಯೊಳಗೆ ಸಿಂಧನೂರು ತಾಲ್ಲೂಕಿನಲ್ಲಿ ಸರ್ಕಾರದಿಂದ ಜವಳಿ ಪಾರ್ಕ್‌ಅನ್ನು ಸ್ಥಾಪಿಸಲಾಗುವುದು?</td></tr>
</table>

ಸಂಖ್ಯೆ: **CI 259 JAKE 2025**

(ಶಿವಾನಂದ ಎಸ್. ಪಾಟೀಲ)

ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು